ಅ.ದಾ. ನಂ.206/2018
ಪಿಡಬ್ಲ್ಯೂ : 1

ಸಾಕ್ಷಿಯನ್ನು ಇಂದು ದಿನಾಂಕ:21-11-2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀಮತಿ ಬಿ ಜಿ ಎಮ್ ವಕೀಲರಿಂದ**

3. ಪ್ರತಿವಾದಿ ಮತ್ತು ನನ್ನ ತಂದೆ ತಾಯಿಯ ಮಧ್ಯ ವ್ಯವಹಾರ ಆದಾಗ ನಾನು 10 ವರ್ಷದ ಮಗುವಾಗಿದ್ದೆ ಎಂದರೆ ಸರಿಯಲ್ಲ. 2001 ರಲ್ಲಿ ನನ್ನ ತಂದೆಯ ಮತ್ತು ಪ್ರತಿವಾದಿಯ ಮಧ್ಯ ವ್ಯವಹಾರ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಆಸ್ತಿಯನ್ನು 1992 ರಲ್ಲಿ ಸರ್ಕಾರದವರು ಮಂಜೂರು ಮಾಡಿರುತ್ತಾರೆ ಎಂದರೆ ನಿಜ. ಸರ್ಕಾರದವರು ಆಸ್ತಿಯನ್ನು ಮಂಜೂರು ಮಾಡುವ ಸಮಯದಲ್ಲಿ ಆಸ್ತಿಯನ್ನು ಯಾವುದೇ ರೀತಿಯಲ್ಲಿ ಹಸ್ತಾಂತರ ಮಾಡಬಾರದು ಎಂದು ನಿಭಂದನಗೆ ಒಳಪಟ್ಟು ಮಂಜೂರು ಮಾಡಿದ್ದರು ಎಂದರೆ ನಿಜ.

4. ನನ್ನ ತಂದೆ ದಾವೆಯನ್ನು ಆಸ್ತಿ ನಮ್ಮದು ಅದು ನಮಗೆ ಬರಬೇಕೆಂದು ದಾವೆ ಸಲ್ಲಿಸಿರುತ್ತಾರೆ. ಪ್ರತಿವಾದಿ 1 ಆಸ್ತಿ ಮಾರಾಟ ಮಾಡಿದ ನಂತರ ಮಲಘಾಣ ಗ್ರಾಮೀಣ ಬ್ಯಾಂಕನಿಂದ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಲವನ್ನು ನನ್ನ ತಂದೆ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ಅಂದಾಜು 20 ವರ್ಷಗಳ ಹಿಂದೆ ನನ್ನ ತಂದೆ ಸಾಲ ಪಡೆದಿರುತ್ತಾನೆ. ನನ್ನ ತಂದೆ ಮಾಡಿದ ಸಾಲವನ್ನು ಪ್ರತಿವಾದಿ 1 ಇತನು ಸಾಲ ತುಂಬಿ ಖರೀದಿ ಮಾಡಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

5. ನಂದಗೇರಿ ಗ್ರಾಮದ ನನ್ನ ತಾಯಿಯ ತವರು ಮನೆ ಎಂದರೆ ನಿಜ. ಸ್ವಲ್ಪ ವರ್ಷಗಳವರೆಗೆ ಮಾತ್ರ ನಾವು ನಂದಗೇರಿ ಗ್ರಾಮದಲ್ಲಿ ವಾಸವಾಗಿದ್ದೇವು ಎಂದರೆ ಸರಿಯಲ್ಲ. ಸುಮಾರು 40 ವರ್ಷಗಳವರೆಗೆ ನನ್ನ ತಂದೆ ಮತ್ತು ನಾವು ಅಲ್ಲಿಯೇ ವಾಸವಾಗಿದ್ದೇವು ಎಂದು ಹೇಳುತ್ತಾರೆ. ನಾನು ಜನಿಸಿದ್ದು ಅದೇ ಗ್ರಾಮದಲ್ಲಿ ಈಗ ನಾವು ಉದ್ಯೋಗಕ್ಕಾಗಿ ಬೇರೆ ಕಡೆ ವಾಸವಾಗಿದ್ದೇವೆ ಎಂದು ಹೇಳುತ್ತಾರೆ.

6. ದಾವಾ ಆಸ್ತಿ ಚೆಕ್ಕಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಚರಂಡಿ, ಉತ್ತರಕ್ಕೆ ನಿಂಗಪ್ಪ ಇವರ ಮನೆ ಮತ್ತು ದಕ್ಷಿಣಕ್ಕೆ ಹಳ್ಳ ಇದೆ. 20 ವರ್ಷಗಳ ಹಿಂದೆ 1 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ನಿವೇಶನ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ಅಂದಾಜು 10 ರಿಂದ 15 ಲಕ್ಷ ಹಣ ಖರ್ಚು ಮಾಡಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಸುಮಾರು 25 ವರ್ಷಗಳಿಂದ ಮನೆ ಕಟ್ಟಿ ವಾಸವಾಗಿದ್ದು ಅವರನ್ನು ದುರುದ್ದೇಶದಿಂದ ಮನೆಯಿಂದ ಹೊರಗೆ ಹಾಕಬೇಕೆಂಬ ಉದ್ದೇಶಕ್ಕಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

7. ನಿಪಿ 1 ದಾಖಲೆಯಲ್ಲಿ ನನ್ನ ತಾಯಿ ಹೆಸರನ್ನು ತೆಗೆದು ಹಾಕಿ 1 ನೇ ಪ್ರತಿವಾದಿಯ ಹೆಸರು ದಾಖಲು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಪಹಣಿ ಪತ್ರಿಕೆ ಅದು 1989-90 ನೇ ಸಾಲಿನದ್ದು ಇದ್ದು ಅದನ್ನು ಕೇವಲ ಸರ್ಕಾರದ ಕೆಲಸಕ್ಕೆ ಮಾತ್ರ ಎಂದು ತೆಗೆದುಕೊಂಡಿರುತ್ತೆನೆ ಎಂದರೆ ಅದು ಹೇಗೆ

ಇತ್ತೊ ಹಾಗೆ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. 1992 ರಿಂದ 94 ರವರೆಗಿನ ಮಾತ್ರ ಕರ ತುಂಬಿದ ಪಾವತಿಗಳನ್ನು ಹಾಜರುಪಡಿಸಿದ್ದು ಉಳಿದ ಪಾವತಿಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ನನ್ನ ತಂದೆ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರಿಂದ ನಾನು ಯಾವುದೇ ಕರವನ್ನು ತುಂಬಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯಿಂದ ಪ್ರತಿವಾದಿಯರನ್ನು ಎತ್ತಿಹಾಕಬೇಕೆಂಬ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಳೆದ 21 ವರ್ಷಗಳಿಂದ ಪ್ರತಿವಾದಿ 1 ಮತ್ತು 2 ಅಲ್ಲಿಯೇ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಸದರಿ ಎಲ್ಲ ವಿಷಯ ನನಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ